ದಿನಾಂಕಃ **15-07-2025** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲುಃ ಶ್ರೀ ಟಿ ಕೆ ಯು ವಕೀಲರಿಂದಃ

ಸರ್ವೆ ನಂ. 10/1 ಪ್ರತಿವಾದಿಯ ಜಮೀನು ಇದ್ದು ಅದರ ದಕ್ಷಿಣ ಭಾಗಕ್ಕೆ ನನ್ನ ಜಮೀನು ಇದೆಎಂದರೆ ಸರಿ . ನನ್ನ ಜಮೀನಿನ ಸರ್ವೆ ನಂ. 10/2 ಎಂದರೆ ಸರಿ . ಅದು ಒಟ್ಟು 12 ಗುಂಟೆ ಇದೆ. ನನ್ನ ದಕ್ಷಿಣ ದಿಕ್ಕಿನಲ್ಲಿ ಇರುವ ಜಮೀನಿಗೂ ಹಾಗೂ ಪ್ರತಿವಾದಿಯ ಜಮೀನು ಬೇರೆ ಬೇರೆ ಎಂದರೆ ಸ ರಿ . ಪ್ರತಿವಾದಿಯವರದ್ದು ಭಾಗಾಯ್ತು ಜಮೀನು ಹಾಗೂ ನನ್ನದು ಖುಷ್ಕಿ ಜಮೀನು ಎಂದರೆ ಸರಿ. ನನಗೆ ಪ್ರತಿವದಿಯ ಜಮೀನನ್ನು ಪಡೆದುಕೊಳ್ಳಬೇಕೆಂಬ ಯಾವುದೇ ದುರುದ್ದೇಶ ಇಲ್ಲ ಎಂದರೆ ಸರಿ. ಅದೇ ರೀತಿ ಪ್ರತಿವಾದಿಯರಿಗೂ ನನ್ನ ಜಮೀನನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶ ಇಲ್ಲ ಎಂದರೆ ಇರಬಹುದು ಎನ್ನುತ್ತಾರೆ. ಸದರಿ ದಾವಾ ಸ್ವತ್ತಿನಲ್ಲಿ 10/1 ರಲ್ಲಿ ಸಣ್ಣ ಗಂಗಮ್ಮನವರಿಗೆ 11 ಗುಂಟೆ, ಮಲ್ಲೇಶಯ್ಯ ರವರಿಗೆ 8 ವರೆ ಗುಂಟೆ, ಶಂಕರಮ್ಮ ಎಂಬುವರಿಗೆ 8 ವರೆ ಗುಂಟೆ ಎಂದರೆ ಸರಿ . ಈಹಂತದಲ್ಲಿ ಸಾಕ್ಷಿಗೆ ಸದರಿ ಆಸ್ತಿಗೆ ಸಂಬಂದಪಟ್ಟಿರುವ ಮೂರು ಪಹಣಿಗಳನ್ನು ತೋರಿಸಿದ್ದು ಅದನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಡಿ-1 ಎಂದು ಗುರುತಿಸಲಾಯಿತು.

ಮಲ್ಲಯ್ಯ ಹಾಗೂ ಗಂಗಯ್ಯ ಎಂಬುವರು ಸಹೋದರರು ಎಂದರೆ ಸ ರಿ. ಸದರಿ ಮಲ್ಲಯ್ಯನವರ ಮಗ ಸಿದದರಾಮಯ್ಯ ಎಂದರೆ ಸರಿ . ಸದರಿ ಸಿದ್ದರಾಮಯ್ಯನವರ ಹೆಂಡತಿ ನಿಡಿ-1 ರಲ್ಲಿ ತೋರಿಸಿರುವ ಸಣ್ಣ ಗಂಗಮ್ಮ ಎಂದರೆ ಸ ರಿ . ಅದೇ ರೀತಿ ಸದರಿ ಗಂಗಯ್ಯನವರಿಗೆ ಇಬ್ಬರು ಗಂಡು ಮ್ಕಕಳು ಅವರೆಂದರೆ ಬಸವರಾಜು ಮತ್ತು 2 ನೇ ಯವರು ಮಲ್ಲೇಶಯ್ಯ. ನಿಡಿ-1 ರಲ್ಲಿರುವ ಮಲ್ಲೇಶಯ್ಯನವರೇ ಗಂಗಯ್ಯನ 2 ನೇ ಮಗ . ಮೇಲೆ ಹೇಳಿರುವ ಬಸವರಾಜು ರವರು ಮರಣ ಹೊಂದಿದ್ದು ಅವರ ಪತ್ನಿ ನಿಡಿ-1 ರಲ್ಲಿರುವ ಶಂಕರಮ್ಮ ಎಂದರೆ ಸ ರಿ . ಸರ್ವೆ ನಂ. 10/1 ನಿಡಿ-1 ರಲ್ಲಿರುವ 28 ಗುಂಟೆ ಅವರದ್ದು ಎಂದರೆ ಸರಿ. ನಿಡಿ-1 ರಲ್ಲಿ ತೋರಿಸಿರುವ ಹಾಗೆ ಸದರಿಯವರುಗಳು ವಿಭಾಗ ಮಾಡಿಕೊಂಡು ರಾಜಸ್ವ ದಾಖಲಾತಿಗಳನ್ನು ಅವರವರ ಹೆಸರಿಗೆ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಡಿ-1 ರಲ್ಲಿ ಇರುವ ಎಂಟ್ರಿಗೂ ಹಾಗೂಾ ನಮಗೂ ಯಾವುದೇ ಸಂಬಂದ ಇಲ್ಲಎಂದರೆ ಸರಿ . ನನ್ನ ದಾವಾ ಆಸ್ತಿಗೆ ನಾವು ಎಂದಿಗೂ ಅಳತೆಯನ್ನು ಮಾಡಿಸಿರುವುದಿಲ್ಲ.

ನಿಡಿ-1 ರಲ್ಲಿರುವ ವ್ಯಕ್ತಿಗಳು ಅವರ ಜಮೀನನ್ನು ಅಳತೆ ಮಾಡಿಸಿದ್ದಾರೋ ಇಲ್ಲವೂೆ ಎಂಬುದು ನನಗೆ ತಿಳಿದಿಲ್ಲ. ಪ್ರತಿವಾದಿಯ ಉತ್ತರ ದಿಕ್ಕಿನಲ್ಲಿ ಮಲ್ಲೇಶಯ್ಯ ಹಾಗೂ ಶಂಕರಮ್ಮ ನವರು ಮನೆಯನ್ನು ಕಟ್ಟಿಕೊಂಡು ಅಲ್ಲೇ ವಾಸ ಇದ್ದಾರೆ ಎಂದರೆ ಸರಿ . ಸದರಿ ಮನೆಗೆ ಸಂಬಂದಪಟ್ಟ ಹಾಗೆ ನಮ್ಮ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸ ರಿ . ಪ್ರತಿವಾದಪತ್ರದ ತಪಶೀಲು ಸ್ವತ್ತಿನ ಪೂರ್ವಕ್ಕೆ- ಶಂಕರಮ್ಮ , ಪಶ್ಚಿಮಕ್ಕೆ- ಮಲ್ಲೇಶಯ್ಯ , ಉತ್ತರಕ್ಕೆ- ರಸ್ತೆ , ದಕ್ಷಿಣಕ್ಕೆ- ವಾದಿಯರು ಇದ್ದಾರೆ ಎಂದರೆ ಸರಿ . ಸದರಿ ಚಕ್ಕುಬಂಧಿಗೆ ಸಂಬಂದಪಟ್ಟ ಹಾಗೆ ನಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ . ಪ್ರತಿವಾದಿಯು ತಿಪಟೂರಿನ ಪ್ರಭಾರ ನ್ಯಾಯಾಲಯದಲ್ಲಿ ಓ ಎಸ್ 337/2017 ರಂತೆ ದಾವೆಯನ್ನು ಹೂಡಿದ್ದು ಅದರಲ್ಲಿ ನಾನೂ ಸಹ ನ್ಯಾಯಾಲಯಕ್ಕೆ

ಬರುತ್ತಿರುತ್ತೇನೆ ಎಂದರೆ ಸರಿ . ಸದರಿ ದಾವೆಯಲ್ಲಿ ಸರ್ವೆ ನಂ. 10/2 ಕ್ಕೆ ಸಂಬಂದ ಪಟ್ಟಿರುವ ಹಾಗೆ ನಾನೂ ಸಹ ತಕರಾರನ್ನು ಸಲ್ಲಿಸಿರುತ್ತೇನೆ ಎಂದರೆ ಸ ರಿ. ಸದರಿ ದಾವೆಯಲ್ಲಿ ವಾದಿಯರು ಅಳತೆಯನ್ನು ಮಾಡಿಸಿದ ಬಳಿಕ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿ . ಸದರಿ ದಾವೆಯಲ್ಲಿ ನಾನು ಅಳತೆಯನ್ನು ಮಾಡಿಸುವುದಾಗಿ ಅರ್ಜಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ . ಆದಾವೆಯಲ್ಲಿ ಮೊದಲಿಗೆ ತಿಪಟೂರಿನ ಎಡಿಎಲ್ ಅರ್ ರವರು ಅಳತೆಯನ್ನು ಮಾಡುವುದಾಗಿ ಅರ್ಜಿ ಸಲ್ಲಿಸಿದ್ದು ಆ ಬಳಿಕ ತುಮಕೂರಿನ ಡಿಡಿಎಲ್ ಆರ್ ರವರು ಮಾಡಬೇಕೆಂದು ಕೋರಿ ಅರ್ಜಿಯನ್ನು ಸಲ್ಲಿಸಿದ್ದು ಅದಕ್ಕೆ ಈ ಕೇಸಿನ ಪ್ರತಿವಾದಿಯರು ಯಾವುದೇ ತಕರಾರು ಇರುವುದಿಲ್ಲ ಎಂದು ಹೇಳಿ ಸಲ್ಲಿಸಿರುತ್ತಾರೆ. ನನ್ನ ಹಾಗೂ ಪ್ರತಿವಾದಿಯ ಜಮೀನಿನ ಚಕ್ಕುಬಂಧಿಗಳನ್ನು ಅಳತೆ ಮಾಡಿಸಲು ನಮ್ಮಗಳ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ ಏಕೆಂದ ರೆ ನಮ್ಮಗಳದ್ದು ಬೇರೆ ಬೇರೆ ಜಮೀನು ಆಗಿರುತ್ತದೆ ಎಂದರೆ ಸರಿ .ನಮ್ಮದು ಬೇರೆ ವಿಸ್ತೀರ್ಣ, ಅವರದ್ದೇ ಬೇರೆ ವಿಸ್ತೀರ್ಣ ಹಾಗೂ ನಮ್ಮದೇ ಬೇರೆ ಚಕ್ಕು ಬಂಧಿ , ಅವರದ್ದೇ ಬೇರೆ ಚಕ್ಕುಬಂಧಿ ಎಂದರೆ ಸರಿ . ಸದರಿ ಆ ದಾವೆಯಲ್ಲಿ ತಿಪಟೂರಿನ ಎಡಿಎಲ್ ಆರ್ ರವರುನಾನು ವಾದಿನಿಯ ಜಮೀನನ್ನು ಒತ್ತುವರಿ ಮಾಡಿರುವುದಾಗಿ ವರದಿಯನ್ನು ನೀಡಿದ್ದು ಆ ವರದಿ ಸರಿ ಇರುವುದಿಲ್ಲ ಎಂದು ಹೇಳಿ ಡಿಡಿ ಎಲ್ ಆರ್ ರವರನ್ನು ನೇಮಕ ಮಾಡಿಕೊಂಡಿರುತ್ತೇವೆ ಎಂದರೆ ಸರಿ . ಅದನ್ನು ಹೊರತು ಪಡಿಸಿ ನನ್ನದು ಬೇರೆಯಾವುದೇ ತಕರಾರು ಇಲ್ಲಎಂದರೆ ಸರಿ .

ಮರು ವಿಚಾರಣೆ ಇಲ್ಲ**.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಅಧಿಕ ಸಿವಿಲ್ ನ್ಯಾಯಾಧೀಶರು,
ತಿಪಟೂರು.